
ಸೂತ್ರವೊಂದು ಸಿನಿಮಾಗಳಲ್ಲಿ ಇತ್ತು. 'ತೇವರ್ ಮಗನ್' ತರಹದ ಸಿನಿಮಾ ಇದಕ್ಕೆ ಉದಾಹರಣೆ. ನಾಯಕ ಪ್ರತಿನಿಧಿಸುವ ಸಮುದಾಯವನ್ನು ಇಲ್ಲಿ ಸೂಕ್ಷ್ಮವಾಗಿ ಗಮನಿಸಿ. ಶಂಕರ್ ನಿರ್ದೇಶನದ ಸಿನಿಮಾಗಳಲ್ಲಿ ಕೂಡ ಇದನ್ನು ಗಮನಿಸಬಹುದು. ಪಾ. ರಂಜಿತ್ ಅವರಂತಹವರು ಹೀಗಿರುವ ಚಿತ್ರರಂಗದ ಒಳಹೊಕ್ಕರು. ದಲಿತ ಸಂಸ್ಕೃತಿಯ ಕಥನಗಳನ್ನು ಈಗಿನ ರಾಜಕೀಯ ದನಿಯೊಂದಿಗೆ ಹೇಳಿದರು. ಜನರೂ ಇಂತಹ ಸಿನಿಮಾಗಳನ್ನು ನೋಡಿದರು. ಅವು ಯಶಸ್ವಿಯಾದದ್ದೇ ಹಣ ಬಂತು. ಹಣಬಲ ಇದ್ದಾಗ ದಲಿತ ಸಂವೇದನೆಯ ಇನ್ನಷ್ಟು ಚಲನಚಿತ್ರಗಳನ್ನು ಕಟ್ಟಿ ಕೊಡುವುದು ಸಾಧ್ಯ. ಮಧುರೈ ಸೂತ್ರ ಮೆರೆಯುತ್ತಿದ್ದ ತಮಿಳುನಾಡಿನ ಸಿನಿಮಾರಂಗದಲ್ಲಿ ಪಾ. ರಂಜಿತ್ ತರಹದವರು ನಿರ್ದೇಶಕನ ಕುರ್ಚಿ ಮೇಲೆ ಗಟ್ಟಿಯಾಗಿ ಕುಳಿತಿರುವುದು ಸಶಕ್ತ ಮಾದರಿ. ಉತ್ತರ ಚೆನ್ನೈನ ಕಥಾವಸ್ತುಗಳ ನಾಯಕರು ದಲಿತರೇ. ಸೂರ್ಯ, ಅಜಿತ್ ತರಹದವರ ಮಧುರೈ ಸೂತ್ರದ ಕಥಾವಸ್ತುಗಳಿಗೆ ಹೊರತಾದ, ವಿರುದ್ಧವೂ ಆದ ದನಿ ಇದು. ಇದು ಕೆಲವರನ್ನು ಚುಚ್ಚುತ್ತದೆ. ಆ ಮೂಲಕ ಹೊಸತನ್ನು ಕಟ್ಟುತ್ತದೆ. ಇದರ ಪರಿಣಾಮ ನಿಧನಿಧಾನವಾಗಿ ಬೇರೆ ಭಾಷೆಗಳಲ್ಲೂ ಆಗಬಲ್ಲದು.

ಪಿಎಂಕೆ ಪಕ್ಷವು ತಮಿಳುನಾಡಿನಲ್ಲಿ ಜಾಹೀರಾತು ಕೊಟ್ಟಿತ್ತು. ಇಂತಿಂಥ ಪ್ರದೇಶಗಳಲ್ಲಿ ದಲಿತರು ಜೀನ್ಸ್ ಹಾಕಕೂಡದು, ಕಪ್ಪು ಕನ್ನಡಕಗಳನ್ನು ಹಾಕಬಾರದು ಎಂದು ತಾಕೀತು ಮಾಡಿತ್ತು. ತಮಿಳುನಾಡಿನ ಇಂತಹ ನೆಲದಲ್ಲಿ ಬೆಳೆದ ದಲಿತರು ತಮ್ಮದೇ ಸಂವೇದನೆಯ, ತಮ್ಮದೇ ಸಮುದಾಯದವರ ತಾಕಲಾಟ-ಸಂಘರ್ಷಗಳನ್ನು ಸಿನಿಮಾ ಮೂಲಕ ಕಟ್ಟಿಕೊಡುತ್ತಿರುವುದು ಮುಖ್ಯ. ಸೂರ್ಯ, ಅಜಿತ್ ಮಾದರಿಯ ಜನಪ್ರಿಯ ಹೊಡೆದಾಟ ಇದಲ್ಲ. ತಮಿಳುನಾಡಿನ ಕೆಲವೆಡೆ ದಲಿತರು ಅಂಬೇಡ್ಕರ್ ಪ್ರತಿಮೆಗಳನ್ನು ಪಂಜರದಲ್ಲಿ ಇಟ್ಟಿದ್ದರು. ಮೇಲ್ಜಾತಿಯವರು ಅದನ್ನು ಒಡೆದುಹಾಕುವರೆಂಬ ಭೀತಿಯೇ ಇದಕ್ಕೆ ಕಾರಣ. ಇಂತಹ ತಮಿಳು ನೆಲದಲ್ಲಿ ಪಾ. ರಂಜಿತ್ ದೊಡ್ಡ ಮಾರುಕಟ್ಟೆ ಸೃಷ್ಟಿಸಿಕೊಂಡರು. ಪ್ರೇಕ್ಷಕರ ಅಭಿರುಚಿಯನ್ನೇ ಪ್ರಶ್ನಿಸುವ ಸವಾಲಿನ ಮಾದರಿ ಇದು. ದಲಿತರೇ ನಾಯಕರಾಗಿ, ರ್‍ಯಾಪ್ ಮಾಡಿ ಕುಣಿಯುತ್ತಾ ಗಟ್ಟಿಯಾಗಿ ಕಥನವನ್ನು ಹೇಳುವ ಈ ಕ್ರಮ ಅನುಕರಣೀಯ.




**◆ 'ಅಫೇರ್ಸ್ ಆಫ್ ಕಾಸ್ಟ್' ಕೃತಿಯನ್ನು ಯಾವ ಪ್ರಕಾರಕ್ಕೆ ಸೇರಿಸುವಿರಿ?**

ಅದನ್ನು ಬರೀ ಆತ್ಮಕತೆ ಆಗಿಸುವುದು ನನಗೆ ಬೇಕಿರಲಿಲ್ಲ. ಸೂರ್ಯವಂಶದವರು 15ನೇ ಶತಮಾನದಲ್ಲಿ ಒಡಿಶಾದಲ್ಲಿ ನೆಲೆಗೊಳಿಸಿದ ಬ್ರಾಹ್ಮಣ್ಯದ ಸೂಕ್ಷ್ಮಗಳನ್ನೂ ನಾನು ಅದರಲ್ಲಿ ಪ್ರಸ್ತಾಪಿಸಿರುವೆ. ಅದನ್ನು ನಾನು 'ಮೈಕ್ರೊ ಹಿಸ್ಟರಿ' ಎಂದು ಕರೆಯಲು ಇಷ್ಟಪಡುವೆ. ನಮ್ಮ ಬದುಕಿನ ಅನುಭವಗಳ ಜತೆಗೇ ಇತಿಹಾಸದ ಒಳಪದರಗಳನ್ನು ಎಳೆದು ಕಾಣಿಸುವ ಪ್ರಯತ್ನವಿದು. ಹೀಗೆ ಮಾಡುವಾಗ ಹಲವು ವರ್ಷಗಳಿಂದ ನನ್ನಲ್ಲೇ ಉಳಿದ ಪ್ರಶ್ನೆಗಳಿಗೆ ನಾನೇ ಉತ್ತರ ಕಂಡುಕೊಳ್ಳುವುದೂ ಸಾಧ್ಯವಿದೆ.

**◆ ಮೊದಲು ರ್‍ಯಾಪ್. ಆಮೇಲೆ ಅಧ್ಯಯನ. ನಡುವೆ ಈ ಪುಸ್ತಕ ರಚನೆಯ ಆಲೋಚನೆ. ಇವೆಲ್ಲಕ್ಕೂ ಕಾರಣವೇನು?**

ನಾನು ರೈಲಿನಲ್ಲಿ ಪ್ರಯಾಣ ಮಾಡುತ್ತಾ ಕಾಲೇಜಿನಿಂದ ಊರಿಗೆ ಮರಳುವಾಗ 'ಸಿಟಿಜನ್‌ಶಿಪ್